Ref.No.49/2023

MW-1,

ದಿನಾಂಕಃ 23-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- 1 ನೇ ಪಾರ್ಟಿ ಪರವಾಗಿಃ ಶ್ರೀ. ಎಂ ಎಸ್ ವಿ ವಕೀಲರಿಂದಃ

ಚಾರ್ಟರ್ ಆಫ್ ಡಿಮಾಂಡ್ ನಲ್ಲಿ ಕೇಳಿದಂತಹ ಬೇಡಿಕೆಗಳು ನ್ಯಾಯಸಮ್ಮತ್ತವಾಗಿರುತ್ತವೆ ಎಂದರೆ ಸರಿಯಲ್ಲ . ಚಾರ್ಟರ್ ಆಫ್ ಡಿಮಾಂಡ್ ನಲ್ಲಿ 8 ಬೇಡಿಕೆಗಳನ್ನು ಇಡಲಾಗಿರುತ್ತದೆ ಎಂದರೆ ಸರಿ . ಚಾರ್ಟರ್ ಆಫ್ ಡಿಮಾಂಡ್ ನ ಪ್ರಕಾರ ಬೇಸಿಕ್ ಅನ್ನು 12,000/- ಹೆಚ್ ಆರ್ ಎ ಅನ್ನು 7,000/-, washing allowance ಅನ್ನು 2,000/- , festival advance 15,000/- ಅನ್ನು ಹೆಚ್ಚು ಮಾಡಲಾಗುತ್ತದೆ ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆ ಯು 2008 ರಲ್ಲಿ ಪ್ರಾರಂಭವಾಗಿರುತ್ತದೆ. 2 ನೇ ಪಾರ್ಟಿ ಸಂಸ್ಥೆ ಯು ಪ್ರಾರಂಭವಾದಗಿನಿಂದ ಮುಚ್ಚುವ ವರೆಗೆ 12 ಕಾಯಂ ನೌಕರರು ಇದ್ದರು. 2 ನೇ ಪಾರ್ಟಿ ಸಂಸ್ಥೆ ಮುಚ್ಚುವ ಕಾಲಕ್ಕೆ 16 ಜನ ಕಾಯಂ ನೌಕರರು ಇದ್ದರು ಎಂದರೆ ಸರಿ . ಪ್ರತಿ ವರ್ಷ profit and loss statement ಅನ್ನು ಸರ್ಕಾರಕ್ಕೆ ಸಲ್ಲಿಸಬೇಕು ಎಂದರೆ ಸರಿ . ಸಾಕ್ಷಿದಾರರು ಮುಂದುವರೆದು 2 ನೇ ಪಾರ್ಟಿ ಸಂಸ್ಥೆ ಯು subsidiary ಸಂಸ್ಥೆಯಾಗಿದ್ದರಿಂದ profit and loss statement ಅನ್ನು ಕಳುಹಿಸುತ್ತಿರಲಿಲ್ಲ ಕೇವಲ ಮೂಲ ಸಂಸ್ಥೆಯಾದ ಚಾಮುಂಡಿ ಸಿಲ್ಕ ನ profit and loss statement ಅನ್ನು ಮಾತ್ರ ಸಲ್ಲಿಸಲಾಗುತ್ತಿತ್ತು ಎಂದು ನುಡಿಯುತ್ತಾರೆ . ಚಾಮುಂಡಿ ಸಿಲ್ಕ ನ profit and loss statement ಅನ್ನು ಈ ನ್ಯಾಯಾಧೀಕರಣದ ಮುಂದೆ ಸಲ್ಲಿಸಿರುವುದಿಲ್ಲ ಎಂದರೆ ಸರಿ . 1 ನೇ ಪಾರ್ಟಿ 16 ಕೆಲಸಗಾರರಿಗೆ ಚಾಮುಂಡಿ ಸಿಲ್ಕ ಸಂಬಳ ನೀಡುತ್ತಿರಲಿಲ್ಲ 2 ನೇ ಪಾರ್ಟಿ ಸಂಸ್ಥೆ ಯು ಸಂಬಳವನ್ನು ನೀಡುತ್ತಿತ್ತು.

2022, 2023, 2024 , ಮತ್ತು ಜನವರಿ 2025 ರವರೆಗೆ ಕೆಲಸಗಾರರಿಗೆ ಕನಿಷ್ಟ ವೇತನಕ್ಕಿಂತ ಕಡಿಮೆ ಸಂಬಳವನ್ನು ನೀಡಿರುತ್ತೆವೆ ಎಂದರೆ ಸರಿಯಲ್ಲ . 2 ನೇ ಪಾರ್ಟಿ ಸಂಸ್ಥೆ ಯು ಸದರಿ ಅವಧಿಯಲ್ಲಿ ಲಾಭದಲ್ಲಿ ನಡೆಯುತ್ತಿತ್ತು ಎಂದರೆ ಸರಿಯಲ್ಲ . ಸಾಕ್ಷಿದಾರರು ಮುಂದುವರೆದು 10 ವರ್ಷಗಳಿಂದ 2 ನೇ ಪಾರ್ಟಿ ಸಂಸ್ಥೆ ಯುನಷ್ಟದಲ್ಲಿ ನಡೆಯುತ್ತಿತ್ತು ಎಂದು ನುಡಿಯುತ್ತಾರೆ . 10 ವರ್ಷಗಳಿಂದ 2 ನೇ ಪಾರ್ಟಿ ಸಂಸ್ಥೆ ಯು ನಷ್ಟದಲ್ಲಿ ನಡೆಯುತ್ತಿದ್ದ ಬಗ್ಗೆ ಈ ನ್ಯಾಯಾಧೀಕರಣದ ಮುಂದೆ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ . 2022 ರಿಂದ 2 ನೇ ಪಾರ್ಟಿ ಸಂಸ್ಥೆ ಯು ಮುಚ್ಚಿದ ದಿನಾಂಕದವರೆಗೆ ಕೆಲಸಗಾರರರು ಚಾರ್ಟರ್ ಆಫ್ ಡಿಮಾಂಡ್ ನ ಬೇಡಿಕೆಗಳನ್ನು ಪಡೆಯಲು ಅರ್ಹರಾಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು 2 ನೇ ಪಾರ್ಟಿ ಸಂಸ್ಥೆ ಯು ನಷ್ಟದಲ್ಲಿ ನಡೆಯುತ್ತಿದ್ದರಿಂದ ಪಡೆಯಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ .

1 ನೇ ಪಾರ್ಟಿ ಕೆಲಸಗಾರರು ಯೂನಿಯನ್ ಮೆಂಬರ್ಸ್ ಆದ್ದರಿಂದ ಚಾರ್ಟರ್ ಆಫ್ ಡಿಮಾಂಡ್ ನ್ನು ಒಪ್ಪಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ . ಚಾರ್ಟರ್ ಆಫ್ ಡಿಮಾಂಡ್ ಬೇಡಿಕೆಗಳನ್ನು ಪಡೆದುಕೊಳ್ಳಲು 1 ನೇ ಪಾರ್ಟಿ ಕೆಲಸಗಾರರು ಅರ್ಹರಾಗಿರುತ್ತಾರೆ ಎಂದರೆ ಸರಿಯಲ್ಲ .

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.